ನೊಂದಣಿ ಸಂಖ್ಯೆ : DWR-S143-2016-17

# ಕೆ.ಎಸ್.ಆರ್.ಟಿ.ಸಿ ಆಫೀಸರ್ಸ್ ವೆಲ್ಫೇರ್ ಅಸೋಸಿಯೇಶನ್ (ರಿ)

ನಂ.6, ಸ್ಫೂರ್ತಿ ನಿಲಯ, ಮಂಜುನಾಥ ನಗರ, ಗೋಕುಲ ರೋಡ, ಹುಬ್ಬಳ್ಳಿ – 580 030.
E-mail : kstofficerwalfare@gmail.com ಮೊಬೈಲ್ : 94827 72666

ಗೌರವಾಧ್ಯಕ್ಷರು
ಡಾ.ಎಮ್.ಪಿ.ನಾಡಗೌಡ MBBS
ಮಾಜಿ ಸದಸ್ಯರು, ವಿಧಾನ ಪರಿಷತ್

ಅಧ್ಯಕ್ಷರು
ಅಶೋಕ ರು. ಪಾಟೀಲ B.Sc. MSW

ಉಪಾಧ್ಯಕ್ಷರು :
ಬಿ.ಎಮ್.ಸತೀಶ M Tech, MBA

ಪ್ರಧಾನ ಕಾರ್ಯದರ್ಶಿ :
ಪಿ.ವೈ.ನಾಯಕ್ BA. MSW

ಖಜಾಂಚಿ :
ಪ್ರಕಾಶ ವೈ.ಕೆ. M.Com

ನಿರ್ದೇಶಕರು :
ನಾರಾಯಣ ಗೌಡಗೇರಿ B.E
ಎಸ್.ಜಿ.ಗಂಗಾಧರ M.Sc (Agn)
ಪ್ರಭಾಕರ ರೆಡ್ಡಿ B.Sc (Agn)
ಜಗದೀಶ ವಿ.ಎಚ್ BD, Bed
ರವಿಕುಮಾರ ಜಿ. B.E
ಶಿವರೆಡ್ಡಿ ವೈ. ಎಮ್. M.Sc (Agn)

ಕ್ರ.ಮಾಂಕ : ದಿನಾಂಕ : 04-10-24.

ರವರಿಗೆ,
ಮಾನ್ಯ ಶ್ರೀ.ರಾಮಲಿಂಗಾರೆಡ್ಡಿ ರವರು
ಸಾರಿಗೆ ಮತ್ತು ಮುಜರಾಯಿ ಇಲಾಖೆ ಸಚಿವರು
ಬೆಂಗಳೂರು-01.

ಮಾನ್ಯರೇ,

**ವಿಷಯ:- ಕರ್ನಾಟಕ ರಾಜ್ಯದ ಸಾರಿಗೆ ಸಂಸ್ಥೆಯ ಅಧಿಕಾರಿಗಳಿಗೆ 7ನೇ ವೇತನವನ್ನು ನಿಗದಿಪಡಿಸುವ ಹಾಗೂ ಇತರೆ ಬೇಡಿಕೆಗಳ ಕುರಿತು.**

*******

ಕರ್ನಾಟಕದ ಜನರ ಜೀವನಾಡಿಯಾಗಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಪ್ರಸ್ತುತ 1.30 ಲಕ್ಷ ನೌಕರರನ್ನು ಹೊಂದಿದ್ದು, ಅದರಲ್ಲಿ ಅಧಿಕಾರಿಗಳ ಸಂಖ್ಯೆಯು 799 ಇದ್ದು, ಅಧಿಕಾರಿಗಳ ಸಂಖ್ಯೆಯು ಸಿಬ್ಬಂದಿಗಳಿಗೆ ಹೋಲಿಸಿದಲ್ಲಿ 146 ಇದ್ದು, ಇದು ಅತೀ ಕಡಿಮೆ ಪ್ರಮಾಣದಲ್ಲಿರುತ್ತದೆ. ಹಾಗೂ ಅಕ್ಕ ಪಕ್ಕ ರಾಜ್ಯದ ಅಧಿಕಾರಿಗಳ ಅನುಪಾತಕ್ಕೆ ಹೋಲಿಸಿದಾಗ ಇದು ಅತೀ ಕಡಿಮೆ ಅನುಪಾತವಾಗಿರುತ್ತದೆ. ಕಾರಣ ಕೊರತೆ ಇರುವ ಅಧಿಕಾರಿಗಳ ನೇಮಕಾತಿಯಾಗುವುದು ಅವಶ್ಯಕವಾಗಿದೆ. ಹಾಗೂ ರಾಜ್ಯದ ಜನತೆಗೆ ಉತ್ತಮವಾದ ಸೇವೆಯನ್ನು ನೀಡುವ ದೃಷ್ಟಿಯಿಂದ ಅಸ್ತಿತ್ವಗೊಂಡಿರುವ ಈ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಇದು ಒಂದು ವಾಣಿಜ್ಯ ಸಂಸ್ಥೆಯಾಗಿರದೇ, ಸಾರ್ವಜನಿಕ ಸೇವಾ ಸಂಸ್ಥೆಯಾಗಿರುತ್ತದೆ. ಸಾರ್ವಜನಿಕರಿಗೆ ಉತ್ತಮ ಸಾರಿಗೆ ಸೌಲಭ್ಯ ನೀಡುವುದು ಮೊದಲ ಆದ್ಯತೆಯಾಗಿರುತ್ತದೆ. ಭಾರತ ದೇಶದಲ್ಲಿ ಯಾವುದೇ ಸಾರಿಗೆ ಸಂಸ್ಥೆ ಲಾಭದಾಯಕವಾಗಿರುವುದಿಲ್ಲ. ಸಂಸ್ಥೆಯ ಆಡಳಿತದಲ್ಲಿ ನಿಯಂತ್ರಣ ಸಾಧಿಸಲು, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಬೆಂಗಳೂರು ಮಹಾನಗನರ ಸಾರಿಗೆ ಸಂಸ್ಥೆ ಈ ನಾಲ್ಕು ಸಂಸ್ಥೆಗಳು ಸ್ವತಂತ್ರವಾಗಿ ಹಾಗೂ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಆದರೆ ಇತ್ತೀಚಿನ ದಿನಗಳಲ್ಲಿ ಸರಕಾರದ ಶಕ್ತಿಯೋಜನೆಯಿಂದ ಸಂಸ್ಥೆಗೆ ಸ್ವಲ್ಪ ಶಕ್ತಿ ಬಂದಂತಾಗಿ ಚೇತರಿಸಿಕೊಳ್ಳುತ್ತಿದೆ.


ಆದರೇ ಸಂಸ್ಥೆಗಳನ್ನು ಇನ್ನೂ ಉತ್ತಮವಾಗಿ, ಆರ್ಥಿಕವಾಗಿ, ಸ್ವಾವಲಂಬಿವಾಗಿ ಹಾಗೂ ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತೆ ಮಾಡಬೇಕಾಗಿರುವುದು ನಮ್ಮೆಲ್ಲರ ಹಾಗೂ ಸರಕಾರದ ಜವಾಬ್ದಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅನುಭವಿ ಹಾಗೂ ಹಿರಿಯ ಅಧಿಕಾರಿಗಳಿಂದ ಸಮಾಲೋಚನೆ ಮಾಡಿ ಸಂಸ್ಥೆಯ ಪುನರ್‌ಜ್ಜೀವನಕ್ಕೆ ಹಾಗೂ ಅವರ ಪ್ರಸ್ತುತ ಬೇಡಿಕೆಗಳನ್ನು ಈ ಕೆಳಕಂಡ ಸಲಹೆಗಳನ್ನು ಈ ಮೂಲಕ ತಮ್ಮಲ್ಲಿ ಸಲ್ಲಿಸುತ್ತಿದ್ದೇವೆ.

1) ಅಧಿಕಾರಿಗಳಿಗೂ ಇಂದಿನ ದಿನಕ್ಕೆ ತಕ್ಕಂತೆ ವೇತನ ಪರಿಷ್ಕರಿಸುವುದು ಅಗತ್ಯವಿರುತ್ತದೆ. ಈಗಾಗಲೇ ಕರ್ನಾಟಕ ರಾಜ್ಯ ಸರಕಾರ ಸರಕಾರಿ ನೌಕರರಿಗೆ 7ನೇ ವೇತನ ಅನುಷ್ಠಾನಗೊಳಿಸಿರುತ್ತದೆ. ಕ.ರಾ.ರ.ಸಾ.ಸಂಸ್ಥೆಯ ಅಧಿಕಾರಿಗಳು Trade Union ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. ಹಾಗೂ Management ನಿರ್ದೇಶನಗಳನ್ನು ಚಾಚು ತಪ್ಪದೇ

ಅನುಷ್ಠಾನಗೊಳಿಸುವಲ್ಲಿ ವಿಶೇಷ ಪಾತ್ರವಹಿಸಿರುವ ಕಾರಣ ಅಧಿಕಾರಿಗಳು Management ನ ಭಾಗವಾಗಿರುವುದರಿಂದ ಅವರಿಗೆ ಸರಕಾರಿ ನೌಕರರಿಗೆ ನೀಡುತ್ತಿರುವ ವೇತವನ್ನು ನಿಗದಿಪಡಿಸುವುದು ವೈಜ್ಞಾನಿಕ ಕ್ರಮವಾಗಿರುತ್ತದೆ. ಇಷ್ಟು ವರ್ಷಗಳ ಕಾಲ Trade Union ನೌಕರರಿಗೆ ವೇತನ ಪರಿಷ್ಕರಿಸಲಾಗಿದ್ದರೂ ಇದು ಅಧಿಕಾರಿಗಳಿಗೆ ವೈಜ್ಞಾನಿಕ ವೇತನ ನಿಗದಿಪಡಿಸಿರುವುದಿಲ್ಲಾ ಹಾಗೂ ಸಮಂಜಸವಾಗಿರುವುದಿಲ್ಲ. ಕಾರಣ ದಯಾಳುಗಳಾದ ಎಲ್ಲಾ ಅಧಿಕಾರಿಗಳು Management ಭಾಗವಾಗಿರುವುದರಿಂದ ಸರಕಾರಿ ನೌಕರರಿಗೆ 7ನೇ ವೇತನವನ್ನು ಅಧಿಕಾರಿಗಳಿಗೆ ಅನುಷ್ಠಾನಗೊಳಿಸುವುದರಿಂದ ಅಧಿಕಾರಿಗಳು ಕೇವಲ 799 ಇದ್ದು. ಇದು ಒಟ್ಟು ನೌಕರರ ಅನುಪಾತಕ್ಕೆ 1.46% ಇರುವುದರಿಂದ ಸಂಸ್ಥೆಗೆ ಹೇಳಿಕೊಳ್ಳುವಂತಹ ಆರ್ಥಿಕ ಹೊರೆ ಸಹ ಆಗುವುದಿಲ್ಲ.

**2)**

| ಕ್ರ.ಸಂ. | ಹುದ್ದೆ | ಒಟ್ಟು ಸಿಬ್ಬಂದಿಗಳು | ಸಿಬ್ಬಂದಿ ಪಾಲು |
|---|---|---|---|
| 1 | ದರ್ಜೆ-1/2(ಹಿರಿಯ/ಕಿರಿಯ ಶ್ರೇಣಿ | 799 | 1.45 |
| 2 | ದರ್ಜೆ-3/4 ಸಿಬ್ಬಂದಿಗಳು | 107565 | 99.27 |



3) ಸಂಸ್ಥೆಯ ಅಧಿಕಾರಿಗಳ ಪ್ರಸ್ತುತ ವೇತನಕ್ಕೂ ಹೆಸ್ಕಾಂ, ಸರಕಾರಿ ನೌಕರರಿಗೂ ಹೋಲಿಸಿದಾಗ ಇರುವ ವ್ಯತ್ಯಾಸದ ವಿವರವನ್ನು ತಮ್ಮ ಮಾಹಿತಿಗಾಗಿ ಸಲ್ಲಿಸಲಾಗಿದೆ.

| SL.NO | GRADE | SLAB (01-01-2020 | GOVT-7TH PAY | HESCOM | DIFF B/W 7TH PAY | BEFORE BDA% | AFTER 31% BDA |
|---|---|---|---|---|---|---|---|
| **1** | **OFFICER CLASS-II** | 42600-1300-47800-1510-52330-1750-59330-1960-75010 | 69250-134200 | 46050-114450 | -26650 | -63.00 | -32.00 |
| **2** | **OFFICER CLASS-I (JUNIOR)** | 56380-1510-59400-1750-64650-1960-78370-2260-98300 | 83700-155200 | 47500-114450 | -27320 | -48.53 | -17.53 |
| **3** | **OFFICER CLASS-I (SINIOR)** | 60190-1510-63210-1750-68460-1960-80220-2260-98300 | 107500-167200 | 72300-128350 | -47310 | -78.71 | -30.41 |
| **4** | **OFFICER CLASS-I (SINIOR) SELECTION GRADE** | 69070-1960-78870-2260-94690-2550-104890 | 131100-188200 | - | -62030 | -89.39 | -32.52 |

4) **ಸಂಸ್ಥೆಯ ಆಧಾರ ಸ್ತಂಭಗಳಾದ ಘಟಕ ವ್ಯವಸ್ಥಾಪಕರ ಹುದ್ದೆಯನ್ನು ಪರಿಣಾಮಕಾರಿಯಾಗಿಸುವುದು ಮತ್ತು ಕೆಲಸದ ಅವಧಿಯನ್ನು ನಿಗದಿಪಡಿಸುವ ಕುರಿತು.** ಸಂಸ್ಥೆಯಲ್ಲಿ ಆದಾಯಗಳಿಸುವ ಪ್ರಮುಖ ಕೇಂದ್ರ ಘಟಕಗಳು. ಆದರೆ ಇತ್ತೀಚಿನ ದಿನಗಳಲ್ಲಿ ಘಟಕ ವ್ಯವಸ್ಥಾಪಕರ ಹುದ್ದೆ ಅತೀ ನಿರ್ಲಕ್ಷತನಕ್ಕೆ ಒಳಗಾಗಿದ್ದು, ಇದರಿಂದಾಗಿ ಘಟಕ ವ್ಯವಸ್ಥಾಪಕರ ಸಾಧನೆ ಕಳಪೆಯಾಗುತ್ತಿದೆ. ಆದ ಕಾರಣ ಈ ಹಿಂದೆ ಘಟಕಗಳನ್ನು ಎ ಬಿ ಸಿ ಎಂದು ವರ್ಗಿಕರಣ ಮಾಡಿ ಉತ್ತಮ/ಅತ್ಯುತ್ತಮ ಘಟಕ ವ್ಯವಸ್ಥಾಪಕರನ್ನ ಗುರುತಿಸಿ ಎ ಮತ್ತು ಬಿ ಘಟಕ ವ್ಯವಸ್ಥಾಪಕರನ್ನು ನಿಯೋಜಿಸುವ ಪ್ರಕ್ರಿಯೆ ಸ್ಥಗಿತಗೊಂಡಿರುತ್ತದೆ. ಇದರಿಂದ ಸಂಸ್ಥೆಯ ಪ್ರಗತಿ ಕುಂಠಿತವಾಗಲು ಕಾರಣವಾಗಿರುತ್ತದೆ. ಇದನ್ನು ಸರಿಪಡಿಸುವ ಹಾಗೂ ಪ್ರೋತ್ಸಾಹಿಸುವ ಕೆಲಸವಾಗಬೇಕಾಗಿದೆ. **ವಾ.ಕ.ರ.ಸಾ ಸಂಸ್ಥೆಯಲ್ಲಿ ಘಟಕ ವ್ಯವಸ್ಥಾಪಕರಿಗೆ ಕೆಲಸದ ಅವಧಿಯನ್ನು ನಿಗದಿಪಡಿಸುವುದು ಹಾಗೂ ಅವರನ್ನು ಮನೋಸ್ಥೈರ್ಯ ಹೆಚ್ಚಿಸುವ ಕೆಲಸವಾಗಬೇಕಾಗಿದೆ.**

5) ತಾತ್ಕಾಲಿಕವಾಗಿ ಉನ್ನತ ವಿಧ್ಯಾಭ್ಯಾಸ ಹಾಗೂ ವಿದ್ಯಾರ್ಜನೆಗಾಗಿ ಬೇರೆ ಬೇರೆ ಉದ್ಯೋಗಳಲ್ಲಿ ಆಸಕ್ತಿ ಇರುವ ಅಧಿಕಾರಿ/ಸಿಬ್ಬಂದಿಗಳಿಗೆ ವೇತನ ರಹಿತ ರಜೆಯ ಮೇಲೆ ಒಂದು ವರ್ಷದಿಂದ 5 ವರ್ಷದ ವರೆಗೆ ಅನುಮತಿ ನೀಡುವ ಪದ್ಧತಿ ಜಾರಿಯಲ್ಲಿತ್ತು. ಆದರೆ ಪ್ರಸ್ತುತ ಸದರಿ ಪದ್ಧತಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ. ಕಾರಣ ಸದರಿ ವಿಷಯಕ್ಕೆ ಸಂಬಂಧಿಸಿದಂತೆ **ಈ ಹಿಂದೆ ಹೊರಡಿಸಿದ ಸುತ್ತೋಲೆ ಸಂಖ್ಯೆ 1192 ನ್ನು ತಡೆಹಿಡಿಯಲಾಗಿದ್ದು, ಸದರಿ ಸುತ್ತೋಲೆಯನ್ನು ಮರು ಪ್ರಾರಂಭಿಸುವುದು. ಇದರಿಂದಾಗಿ ಅಧಿಕಾರಿಗಳ ಗುಣಮಟ್ಟ ಸುದಾರಿಸುವುದಲ್ಲದೇ, ಸಂಸ್ಥೆಯ ಹೊರೆಯು ಸಹ ಕಡಿಮೆಗೊಳಿಸಿದಂತಾಗುತ್ತದೆ.**

ನೊಂದಣಿ ಸಂಖ್ಯೆ : DWR-S143-2016-17

# ಕೆ.ಎಸ್.ಆರ್.ಟಿ.ಸಿ ಆಫೀಸರ್ಸ್ ವೆಲ್ಫೇರ್ ಅಸೋಸಿಯೇಶನ್ (ರಿ)

ನಂ.6, ಸ್ಫೂರ್ತಿ ನಿಲಯ, ಮಂಜುನಾಥ ನಗರ, ಗೋಕುಲ ರೋಡ, ಹುಬ್ಬಳ್ಳಿ – 580 030.
E-mail : kstofficerwalfare@gmail.com ಮೊಬೈಲ್ : 94827 72666

ಗೌರವಾಧ್ಯಕ್ಷರು
ಡಾ.ಎಮ್.ಪಿ.ನಾಡಗೌಡ MBBS
ಮಾಜಿ ಸದಸ್ಯರು, ವಿಧಾನ ಪರಿಷತ್

ಅಧ್ಯಕ್ಷರು
ಅಶೋಕ ರು. ಪಾಟೀಲ B.Sc. MSW

ಉಪಾಧ್ಯಕ್ಷರು :
ಬಿ.ಎಮ್.ಸತೀಶ M Tech, MBA

ಪ್ರಧಾನ ಕಾರ್ಯದರ್ಶಿ :
ಪಿ.ವೈ.ನಾಯಕ್ BA. MSW

ಖಜಾಂಚಿ :
ಪ್ರಕಾಶ ವೈ.ಕೆ. M.Com

ನಿರ್ದೇಶಕರು :
ನಾರಾಯಣ ಗೌಡಗೇರಿ B.E
ಎಸ್.ಜಿ.ಗಂಗಾಧರ M.Sc (Agn)
ಪ್ರಭಾಕರ ರೆಡ್ಡಿ B.Sc (Agn)
ಜಗದೀಶ ವಿ.ಎಚ್ BD, Bed
ರವಿಕುಮಾರ ಜಿ. B.E
ಶಿವರೆಡ್ಡಿ ವೈ. ಎಮ್. M.Sc (Agn)

ಕ್ರ.ಮಾಂಕ : ದಿನಾಂಕ : ..............................

6) ಸಂಸ್ಥೆಗಳು ತನ್ನ ಕಾರ್ಯಾಚರಣೆಯ ಶೇಕಡಾ 50 ಕ್ಕಿಂತ ಹೆಚ್ಚು ಭಾಗವನ್ನು ಗ್ರಾಮೀಣ ಪ್ರದೇಶದಲ್ಲಿ ಕಾರ್ಯಚರಣೆಗೊಳಿಸುತ್ತಿದ್ದು, ಈ ಕಾರ್ಯಾಚರಣೆಯಿಂದ 3 ಸಂಸ್ಥೆಗಳಿಗೆ ವಾರ್ಷಿಕವಾಗಿ ಸುಮಾರು ರೂ. 250 ರಿಂದ 300 ಕೋಟಿ ನಷ್ಟ ಉಂಟಾಗುತ್ತಿದೆ. **ಕಾರಣ ಮಹಾರಾಷ್ಟ್ರ ಹಾಗೂ ಇತರೆ ರಾಜ್ಯಗಳಲ್ಲಿರುವಂತೆ, ಸದರಿ ಮೊತ್ತವನ್ನು ಸರ್ಕಾರವು ಮರುಪಾವತಿಸುವಂತೆ ಕೋರಲಾಗಿದೆ.**

7) ಸಂಸ್ಥೆಯಲ್ಲಿ ನೇಮಕಗೊಂಡ ಕೆಲವು ಅಧಿಕಾರಿಗಳು 10 ರಿಂದ 15 ವರ್ಷ ಒಂದೇ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರೂ ಸಹ, ಅವರಿಗೆ ಮುಂಬಡ್ತಿ ನೀಡಿರುವುದಿಲ್ಲ. ಇದರಿಂದ ಅಧಿಕಾರಿಗಳು ಮಾನಸಿಕವಾಗಿ ಕುಂದಿರುತ್ತಾರೆ. **ಕಾರಣ ಅಧಿಕಾರಿಗಳಿಗೆ ಕೆ.ಎ.ಎಸ್. ಅಧಿಕಾರಿಗಳಿಗೆ ಬಡ್ತಿ ನೀಡುವ ಮಾದರಿಯಲ್ಲಿ ಕಾಲಮಿತಿ (Time Bond) ಮುಂಬಡ್ತಿ ನೀಡುವುದು.**

8) ನಾಲ್ಕು ಸಾರಿಗೆ ನಿಗಮಗಳಲ್ಲಿ ಸಂಸ್ಥೆಯ ಮಂಡಳಿಗಳಿದ್ದು, ಸದರಿ ಮಂಡಳಿಗಳಿಗೆ ಸರ್ಕಾರದಿಂದ ನೇಮಿಸಲ್ಪಟ್ಟ ಅಧಿಕಾರಿ/ಅಧಿಕಾರೇತರ ನಿರ್ದೇಶಕರು ಇದ್ದು, ಸಂಸ್ಥೆಯ ನಿಲುವುಗಳ ಬಗ್ಗೆ ನಿರ್ಧಾರ ಕೈಗೊಳ್ಳುತ್ತಿದ್ದಾರೆ. ಆದರೆ ಸಂಸ್ಥೆಯ ನಿಲುವುಗಳನ್ನು ಪರಿಣಾಮಕಾರಿಯಾಗಿ ನಿರ್ಧಾರ ತೆಗೆದುಕೊಳ್ಳಲು ಅನುಕೂಲವಾಗುವಂತೆ, **ಅಧಿಕಾರಿಗಳ ಕ್ಷೇಮಾಭಿವೃದ್ದಿ ಸಂಘದಿಂದ ನಾಮನಿರ್ದೇಶನಗೊಂಡ ಒಬ್ಬ ಅಧಿಕಾರಿಯನ್ನ ಹಾಗೂ ನೌಕರರ ವರ್ಗದವರಿಂದ ನಾಮನಿರ್ದೇಶನಗೊಂಡ ಒಬ್ಬ ನೌಕರನನ್ನ ಸಂಸ್ಥೆಯ ನಿರ್ದೇಶಕ ಮಂಡಳಿಗೆ ನಾಮನಿರ್ದೇಶನ ಮಾಡುವುದರಿಂದ ಅಧಿಕಾರಿಗಳ ಹಾಗೂ ನೌಕರರ ಹಿತ ಕಾಪಾಡಲು ಸಾಧ್ಯವಾಗುತ್ತದೆ.**

9) **ಸಂಸ್ಥೆಯಲ್ಲಿ ಅಧಿಕಾರಿಗಳ ವರ್ಗಾವಣೆ ಹಾಗೂ ಪದೋನ್ನತಿಯಲ್ಲಿ ಸಾಕಷ್ಟು ತಾರ್ಯತಮ್ಯಗಳಿದ್ದು ಇದನ್ನು ನಿವಾರಿಸುವ ನಿಟ್ಟಿನಲ್ಲಿ ಪಾರದರ್ಶಕತೆ ತರುವುದು ಹಾಗೂ ತಾರತಮ್ಯ ನೀತಿಯನ್ನು ತಗೆದು ಹಾಕುವುದು ಅನಿವಾರ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ನಿಯಮಗಳ ಅವಶ್ಯಕತೆ ಇರುತ್ತದೆ.ಆದ್ದುದರಿಂದ ಈ ರೀತಿಯ ನಿಯಮಗಳನ್ನು ನಿಲ್ಲಿಸುವ ಕ್ರಮವಾಗಬೇಕಿದೆ.**

10) ಸಂಸ್ಥೆಯಲ್ಲಿ ಅಧಿಕಾರಿಗಳ ಜೇಷ್ಠತೆ ನಿಗದಿಪಡಿಸುವಲ್ಲಿ ಸರಿಯಾದ ಹಾಗೂ ನ್ಯಾಯಯುತವಾದ ನಿಯಮಾವಳಿಗಳಿರುವುದಿಲ್ಲ. ಇದರಿಂದಾಗಿ ಹಿರಿಯ ಅಧಿಕಾರಿಗಳು, ಕಿರಿಯ ಅಧಿಕಾರಿಗಳ ಕೆಳಗಡೆ ಕೆಲಸ ಮಾಡುವಂತಾಗಿ, ಅಧಿಕಾರಿಗಳು ನೈತಿಕವಾಗಿ ಕುಸಿದಿರುತ್ತಾರೆ. ಕಾರಣ **ಸಾಮಾನ್ಯ ಜೇಷ್ಠತೆ (Comman Seniority) ನಿಗದಿಪಡಿಸಿ, ಈಗಾಗಿರುವ ಜೇಷ್ಠತೆಯ ನ್ಯೂನ್ಯತೆಗಳನ್ನು ಸರಿಪಡಿಸುವ ಅವಶ್ಯಕವಾಗಿದೆ.**

11) **KSRTC CADRE AND REGULATIONS 1982** ರ **ಹರಿಚ್ಛೇದ 17/1** ರ **ಮೇಲೆ ಸಾಕಷ್ಟು** ಅಧಿಕಾರಿಗಳನ್ನು ಮೂಲ ಹುದ್ದೆಯಿಂದ ಬೇರೆ ಹುದ್ದೆಗೆ ನಿಯೋಜಿಸಲಾಗಿದ್ದು,

ನೋಂದಣಿ ಸಂಖ್ಯೆ : DWR-S143-2016-17

KSRTC OFFICERS WELFARE ASSOCIATION KOWA HUBLI

# ಕೆ.ಎಸ್.ಆರ್.ಟಿ.ಸಿ ಆಫೀಸರ್ಸ್ ವೆಲ್ಫೇರ್ ಅಸೋಶಿಯೇಶನ್ (ರಿ)

ನಂ.6, ಸ್ಫೂರ್ತಿ ನಿಲಯ, ಮಂಜುನಾಥ ನಗರ, ಗೋಕುಲ ರೋಡ, ಹುಬ್ಬಳ್ಳಿ – ೫೮೦ ೦೩೦.
E-mail : kstofficerwalfare@gmail.com ಮೊಬೈಲ್ : 94827 72666

ಗೌರವಾಧ್ಯಕ್ಷರು
ಡಾ.ಎಮ್.ಪಿ.ನಾಡಗೌಡ MBBS
ಮಾಜಿ ಸದಸ್ಯರು, ವಿಧಾನ ಪರಿಷತ್

ಅಧ್ಯಕ್ಷರು
ಅಶೋಕ ರು. ಪಾಟೀಲ B.Sc. MSW

ಉಪಾಧ್ಯಕ್ಷರು :
ಬಿ.ಎಮ್.ಸತೀಶ M Tech, MBA

ಪ್ರಧಾನ ಕಾರ್ಯದರ್ಶಿ :
ಪಿ.ವೈ.ನಾಯಕ್ BA. MSW

ಖಜಾಂಚಿ :
ಪ್ರಕಾಶ ವೈ.ಕೆ. M.Com

ನಿರ್ದೇಶಕರು :
ನಾರಾಯಣ ಗೌಡಗೇರಿ B.E
ಎಸ್.ಜಿ.ಗಂಗಾಧರ M.Sc (Agn)
ಪ್ರಭಾಕರ ರೆಡ್ಡಿ B.Sc (Agn)
ಜಗದೀಶ ವಿ.ಎಚ್ BD, Bed
ರವಿಕುಮಾರ ಜಿ. B.E
ಶಿವರೆಡ್ಡಿ ವೈ. ಎಮ್. M.Sc (Agn)

ಕ್ರ.ಮಾಂಕ :                                                  ದಿನಾಂಕ : ..............................

ಇದರಿಂದಾಗಿ ಸಾಕಷ್ಟು ಅಧಿಕಾರಿಗಳ ಸೇವೆಯು ಸಮರ್ಪಕವಾಗಿ ಬಳಕೆ ಆಗುತ್ತಿಲ್ಲ. ಅಲ್ಲದೇ ಅಧಿಕಾರಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗದೇ, ಇದು ಸಂಸ್ಥೆಯ ಪ್ರಗತಿಗೆ ಕುಂಠಿತವಾಗಿರುತ್ತದೆ. ಅಲ್ಲದೇ ಹಗರಣಗಳು ಆಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಅತೀ ಅವಶ್ಯಕವಿದ್ದಲ್ಲಿ ಮಾತ್ರ ನಿಯೋಜಿಸುವುದು.

12) ಸಂಸ್ಥೆಯ ಅಧಿಕಾರಿಗಳ ವಿರುದ್ಧ ದಾಖಲಾದ ಶಿಸ್ತು ಪ್ರಕರಣಗಳನ್ನು ಕಾಲಮಿತಿಯಲ್ಲಿ ಮುಕ್ತಾಯಗೊಳಿಸಲು ಈಗಾಗಲೇ ಸಾಕಷ್ಟು ನಿಯಮಾವಳಿ/ಸುತ್ತೋಲೆಗಳು ಜಾರಿಯಲ್ಲಿರುತ್ತವೆ. ಆದಾಗ್ಯೂ 5 ರಿಂದ 10 ವರ್ಷ ಅಪರಾಧ ಪ್ರಕರಣ ವಿಲೇವಾರಿ ಮಾಡದೇ ಹೆಚ್ಚಿನ ಅಧಿಕಾರಿಗಳಿಗೆ ಅನ್ಯಾಯವಾಗಿರುತ್ತದೆ. ಅದರಂತೆ **ಕಾಲಮಿತಿಯಲ್ಲಿ ಪ್ರಕರಣಗಳನ್ನು ವಿಲೇವಾರಿ ಮಾಡಲು ಕಟ್ಟುನಿಟ್ಟಿನ ಆದೇಶ ನೀಡಲು ಕೋರಿದೆ.** ಕಾಲಮಿತಿಯಲ್ಲಿ ವಿಲೇವಾರಿ ಆಗದೇ ಇರುವುದರಿಂದ ಅನೇಕ ಅಧಿಕಾರಿಗಳು ಬಡ್ತಿಯಿಂದ ವಂಚಿತರಾಗಿರುತ್ತಾರೆ.

13) ಈಗಾಗಲೇ ನಿವೃತ್ತ ಅಧಿಕಾರಿಗಳಿಗೆ ಅವರ ಪತಿ/ಪತ್ನಿಯವರೊಂದಿಗೆ ಸಾಮಾನ್ಯ ಮತ್ತು ವೇಗದೂತ ಸಾರಿಗೆಗಳಲ್ಲಿ ಉಚಿತ ಹಾಗೂ ಪ್ರತಿಷ್ಠಿತ ಸಾರಿಗೆಗಳಲ್ಲಿ ಪ್ರಯಾಣ ದರದಲ್ಲಿ 50% ರಿಯಾಯಿತಿ ಸೌಲಭ್ಯ ಒದಗಿಸಲಾಗಿದೆ. ಆದರೆ ಸೇವೆಯಲ್ಲಿ ಮರಣ ಹೊಂದಿರುವ ಸಿಬ್ಬಂದಿ/ ಅಧಿಕಾರಿಗಳ ಪತಿ/ಪತ್ನಿಗೆ ಈ ಸೌಲಭ್ಯ ಒದಗಿಸಿರುವುದಿಲ್ಲ ಹಾಗೂ ಸೇವೆಯಲ್ಲಿರುವ ಅಧಿಕಾರಿಗಳಿಗೆ ಅವರ ಪತಿ/ಪತ್ನಿಯವರೊಂದಿಗೆ ಪ್ರತಿಷ್ಠಿತ ಸಾರಿಗೆಗಳು ಸೇರಿದಂತೆ ಎಲ್ಲಾ ಸಾರಿಗೆಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ನೀಡುವುದು. **ಹಾಗೂ ಸೇವೆಯಲ್ಲಿರುವ ಅಧಿಕಾರಿಗಳಿಗೆ ಹಾಗೂ ಪಾಲಕರಿಗೂ ಸಹ Family Pass ನೀಡಲು ಕ್ರಮಕೈಗೊಳ್ಳುವುದು.**

14) ಸಂಸ್ಥೆಯಲ್ಲಿ ಅಧಿಕಾರಿಗಳು ಒತ್ತಡದಲ್ಲಿ ಕಾರ್ಯನಿರ್ವಹಿಸುವ ಅನಿವಾರ್ಯವಿದ್ದು, ಸಹಜವಾಗಿ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದು, ಇಂತಹ ಸಂದರ್ಭಗಳಲ್ಲಿ ವೈದ್ಯಕೀಯ ವೆಚ್ಚಗಳನ್ನು ಮರುಪಾವತಿಸಲು ಹಾಲಿ ನಿಯಮಗಳಲ್ಲಿ ಹಲವಾರು ನಿರ್ಭಂದಗಳಿದ್ದು, ಹಾಲಿ ನಿರ್ಬಂಧಗಳನ್ನು ಸಡಿಲಗೊಳಿಸಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು **ಯಾವುದೇ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದ ಸಂದರ್ಭಗಳಲ್ಲಿ CGHS ದರಗಳನ್ವಯ ಅವರುಗಳಿಗೆ ವೈದ್ಯಕೀಯ ವೆಚ್ಚ ಮರುಪಾವತಿಗೆ ವ್ಯವಸ್ಥೆ ಕಲ್ಪಿಸುವುದು.**

15) ಕೆ.ಎಸ್.ಆರ್.ಟಿ.ಸಿ ಆಫೀಸರ್ಸ್ ವೆಲ್ಫೇರ್ ಅಶೋಶಿಯೇಶನ್ ಸಂಘದ ಕಾರ್ಯಚಟುವಟಿಕೆಗಳಿಗೆ ಸ್ಥಳದ ಅವಶ್ಯಕತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು, ಹುಬ್ಬಳ್ಳಿ ಹಾಗೂ ಕಲಬುರ್ಗಿ ಕೇಂದ್ರ ಸ್ಥಾನದಲ್ಲಿ ಲಭ್ಯವಿರುವ ಸಂಸ್ಥೆಯ ಆಸ್ತಿಯಲ್ಲಿ ಸುಮಾರು 50 * 80 ಅಡಿ ಸ್ಥಳಾವಕಾಶ ನೀಡಲು ಕೋರಿದೆ.

ಒಟ್ಟಾರೆಯಾಗಿ ಸಂಸ್ಥೆಯನ್ನು ಆರ್ಥಿಕವಾಗಿ ಸಧೃಡಗೊಳಿಸುವಲ್ಲಿ ಸರಕಾರದ ಹಾಗೂ ನೌಕರರ ಪಾತ್ರ ಅಪಾರವಾಗಿದ್ದು, ತನ್ನ ಕಾಲ ಮೇಲೆ ತಾನು ನಿಲ್ಲಲು, ಇದರಲ್ಲಿ ಕೇವಲ ಒಂದು ವರ್ಗದ ಹಿತಾಸಕ್ತಿ ಇರುವುದಿಲ್ಲಾ. ಎಲ್ಲಾ ವರ್ಗದ ಅಧಿಕಾರಿ/ಸಿಬ್ಬಂದಿ/ನೌಕರರ ಹಾಗೂ ಅವರ ಕುಟುಂಬದವರ ಜೀವನದ ಪ್ರಶ್ನೆಯಾಗಿರುವುದಲ್ಲದೇ ಹಾಗೂ ನಾಡಿನ ಜನತೆಯ ಜೀವನಾಡಿಯಾದ ಸಾರಿಗೆ ಸಂಸ್ಥೆಯ ಉಳಿವಿನ ಪ್ರಶ್ನೆಯೂ ಇದಾಗಿದೆ, ಸರಕಾರ ಈ ಇಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಂಡಲ್ಲಿ ಮಾತ್ರ, ಈ ಮುಳಗುತ್ತಿರುವ ಹಡಗು ಮತ್ತೆ ಪ್ರಯಾಣಿಸಲು ಸಾಧ್ಯ. ಕಾರಣ ಈ ಸಲಹೆಗಳನ್ನು ಕಾರ್ಯರೂಪಕ್ಕೆ ತರಲು ಹಾಗೂ ಅಧಿಕಾರಿಗಳ ಬೇಡಿಕೆ ಈಡೇರಿಸಿ ಅವರ ಮನೋಸ್ಥೈರ್ಯ ಹೆಚ್ಚಿಸಲು ತಮ್ಮಲ್ಲಿ ಈ ಮೂಲಕ ಕೋರಲಾಗಿದೆ.

**ವಂದನೆಗಳೊಂದಿಗೆ,**

**ತಮ್ಮ ವಿಶ್ವಾಸಿ,**

**(ಡಾ.ಎಮ್. ಪಿ. ನಾಡಗೌಡ)**
**ಗೌರವಾಧ್ಯಕ್ಷರು**
**ಕೆ.ಎಸ್.ಆರ್.ಟಿ.ಸಿ ಆಫೀಸರ್ಸ್ ವೆಲ್ಫೇರ್ ಅಶೋಶಿಯೇಶನ್.**